Plans to set up University of Aviation

| | | | | | |
|---|---|---|---|---|---|
| Pub Date: | 01 Dec 2015 | Publication: | Eesanjee | Edition: | Bangalore |
| Journalist: | Bureau | Language: | Kannada | Page No.: | 8 |
| CCM: | 88.45 | MAV: | 21228.5 | Circulation | 29000 |






ನಗರದಲ್ಲಿ ಹಮ್ಮಿಕೊಂಡಿದ್ದ ರಕ್ಷಣಾ ಮತ್ತು ವೈಮಾನಿಕ ಕ್ಷೇತ್ರದ ನಿರ್ವಹಣೆ, ದುರಸ್ತಿ ಮತ್ತು ಸಮಗ್ರ ವಹಿವಾಟು ಉದ್ಯಮಿಗಳ ಸಮಾವೇಶದಲ್ಲಿ ವಾರ್ತಾ ಸಚಿವ ರೋಷನ್ ಬೇಗ್ ವಿಮಾನ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು. ಎಚ್‌ಎಎಲ್ ಸಿಇಒ ಕಾವೇರಿ ರಂಗನಾಥನ್, ಮೂಲ ಸೌಕರ್ಯ ಮತ್ತು ಅಭಿವೃದ್ಧಿ ನಿಗಮದ ಕಾರ್ಯದರ್ಶಿ ವಂದಿತಾ ಶರ್ಮ, ಪುಲಕೇಸೇನ್, ಟೆಂಪ್ರಿಕರ್ ಮತ್ತಿತರರು ಪಾಲ್ಗೊಂಡಿದ್ದರು.

# ವೈಮಾನಿಕ ಕ್ಷೇತ್ರದ ವಿವಿ ಸ್ಥಾಪನೆಗೆ ಚಿಂತನೆ

**ಬೆಂಗಳೂರು, ಡಿ.1**- ಭಾರತದಲ್ಲಿ ನಾನಾ ವಿಮಾನಗಳು ಮತ್ತು ಹೆಲಿಕ್ಯಾಪ್ಟರ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಕ್ಷೇತ್ರಕ್ಕೆ ಪೂರಕವಾಗಿ ಕೆಲಸ ಮಾಡುತ್ತಿದೆ. ಈ ನಿಟ್ಟಿನಲ್ಲಿ ವೈಮಾನಿಕ ಕ್ಷೇತ್ರದ ವಿಶ್ವವಿದ್ಯಾಲಯ ಸ್ಥಾಪಿಸುವ ಚಿಂತನೆ ನಡೆಸಲಾಗಿದೆ ಎಂದು ವಾರ್ತಾ ಸಚಿವ ರೋಷನ್ ಬೇಗ್ ಇಂದಿಲ್ಲಿ ತಿಳಿಸಿದರು.

ನಗರದ ಅಶೋಕ್ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ರಕ್ಷಣಾ ಮತ್ತು ವೈಮಾನಿಕ ಕ್ಷೇತ್ರದ ನಿರ್ವಹಣೆ, ರಿಪೇರಿ ಮತ್ತು ಸಮಗ್ರ ವಹಿವಾಟು ಉದ್ಯಮಿಗಳ 2 ದಿನಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಕೈಗಾರಿಕೆ ಮತ್ತು ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಲು ಒಂದು ಸಾವಿರ ಎಕರೆ ಪ್ರದೇಶವನ್ನು ಕಾಯ್ದಿರಿಸಲಾಗಿದೆ ಎಂದರು.

ಕೈಗಾರಿಕೆ ಮತ್ತು ಉದ್ಯಮಗಳ ಸ್ಥಾಪನೆಗೆ 50 ಕೋಟಿ ರೂ. ಯೋಜನೆಗೆ ಶೀಘ್ರದಲ್ಲೇ ಅನುಮತಿ ದೊರೆಯಲಿದೆ. ಬೆಂಗಳೂರು ಭಾರತದ ವೈಮಾನಿಕ ಕ್ಷೇತ್ರದ ರಾಜಧಾನಿ ಇದ್ದಂತೆ ಎಸ್‌ಎಎಲ್, ಬಿಇಎಲ್ ಮತ್ತು ಇಸ್ರೋದಂತಹ ಪ್ರಮುಖ ಸಂಸ್ಥೆಗಳು ನೆಲೆಯೂರಿವೆ ಎಂದು ಅವರು ತಿಳಿಸಿದರು.

ಮೂಲ ಸೌಕರ್ಯ ಮತ್ತು ಅಭಿವೃದ್ಧಿ ನಿಗಮದ ಕಾರ್ಯದರ್ಶಿ ವಂದಿತಾ ಶರ್ಮಾ ಮಾತನಾಡಿ, ಬೆಂಗಳೂರಿನಲ್ಲಿ 2008ರಲ್ಲಿ ಆರಂಭವಾದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಈಗ ಹೋಲಿಕೆ ಮಾಡಿದರೆ, ಅದಕ್ಕಿಂತ ಮೀರಿ ಬೆಳೆದಿದ್ದು, ಈಗ 18 ಮಿಲಿಯನ್ ಪ್ರಯಾಣಿಕರು ಬೆಂಗಳೂರಿಗೆ ಬರುತ್ತಿದ್ದಾರೆ. ಇನ್ನು ಹೆಚ್ಚಿನ ಸೌಲಭ್ಯ ಕಲ್ಪಿಸಲು ವಿಮಾನ ನಿಲ್ದಾಣದಲ್ಲಿ 2ನೆ ರನ್‌ವೇ ಆರಂಭವಾಗಬೇಕಿದೆ ಎಂದರು.

ವೈಮಾನಿಕ ಕ್ಷೇತ್ರದ ದುರಸ್ತಿ ಉದ್ಯಮದ ಮಾಲೀಕ ಭರತ್ ಮಲ್ಕಾನಿ ಮಾತನಾಡಿ, ಬೆಂಗಳೂರು ಅತ್ಯಂತ ಮಲಿನ ನಗರವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿದರು.

ನಾನು ನಿನ್ನೆ ರಾತ್ರಿ ಬೆಂಗಳೂರಿಗೆ ಬಂದಿದ್ದೇನೆ. ಬೆಳಿಗ್ಗೆ ನನಗೆ ಕೆಮ್ಮು ಆಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ವೈಮಾನಿಕ ಕ್ಷೇತ್ರದ ದುರಸ್ತಿ ಇರುವುದಕ್ಕೋಸ್ಕರ ಪ್ರತ್ಯೇಕ ರನ್‌ವೇ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ ಅವರು, ಇನ್ನು ಹೆಚ್ಚಿನ ಸೌಲಭ್ಯ ಕಲ್ಪಿಸಲು ಸಚಿವರು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಭೂಮಿ ಬೆಲೆ ಹೆಚ್ಚಳವಾಗಿರುವುದರಿಂದ ಉದ್ಯಮಿಗಳಿಗೆ ತೊಂದರೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೆಚ್‌ಎಎಲ್ ಕಂಪನಿಯ ಸಿಇಒ ಕಾವೇರಿ ರಂಗನಾಥನ್ ಮಾತನಾಡಿ, ಭಾರತದ ವೈಮಾನಿಕ ಕ್ಷೇತ್ರ ಅತ್ಯಂತ ಎತ್ತರಕ್ಕೆ ಬೆಳೆದಿದೆ. 65 ಮಿಲಿಯನ್ ಅಂತಾರಾಷ್ಟ್ರೀಯ ಪ್ರಯಾಣಿಕರು ಭಾರತಕ್ಕೆ ಬರುತ್ತಿದ್ದಾರೆ. ಅಲ್ಲದೆ, ಸರಕು ಸಾಗಾಣಿಕೆಗೆ 1.80 ಮಿಲಿಯನ್ ಟನ್‌ಗೆ ಹೆಚ್ಚಾಗಿದೆ ಎಂದು ತಿಳಿಸಿದರು.

ಟೆಂಪ್ರಿಕರ್, ಪುಲಿಕೆ ಸೇನ್ ಗುಪ್ತಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.